156/6 ...

**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ. ರವಿ ಇವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 92 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ</u>**

**ವಿಷಯ:** ಇಂಧನ ಇಲಾಖೆಯಲ್ಲಿ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತಿದ್ದು, ಆದರೆ ಮಾನವಿಯತೆ ಮೇಲೆ ಇಲಾಖೆಯಲ್ಲಿನ ಮೃತ ನೌಕರನ ಕುಟುಂಬದವರಿಗೆ ಅನುಕಂಪದ ಉದ್ಯೋಗ ನೀಡಲು ಹುದ್ದೆಗಳು ಖಾಲಿ ಇಲ್ಲ ಎಂದು ಹೇಳುತ್ತಿದ್ದಾರೆ. ಕಳೆದ ಹಲವು ವರ್ಷಗಳಿಂದ ಯಾವುದೇ ಅನುಕಂಪದ ಮೇಲೆ ನೇಮಕಾತಿ ಮಾಡಿಕೊಳ್ಳದೆ ಹಲವು ಕುಟುಂಬಗಳು ಬೀದಿಗೆ ಬಿದ್ದಿವೆ.

ಇತ್ತೀಚೆಗೆ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯಲ್ಲಿ ಕಿರಿಯ ಪವರಮ್ಯಾನ ಒಬ್ಬರು ತೀರ್ಥಹಳ್ಳಿ ಬಳಿ ದಿನಾಂಕ:21.04.2023 ರಲ್ಲಿ ಕರ್ತವ್ಯವನ್ನು ಮುಗಿಸಿ ಮನೆಗೆ ತೆರಳುತ್ತಿರುವಾಗ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದು ಸದರಿ ನೌಕರನ ಕುಟುಂಬದವರಿಗೆ ಇದುವರೆವಿಗೂ ಅನುಕಂಪದ ಆಧಾರದ ನೇಮಕಾತಿ ನೀಡದಿರುವುದಿಲ್ಲ. ಅಲ್ಲದೆ ಅನುಕಂಪದ ನೇಮಕಾತಿಯನ್ನು ನೌಕರನು ಕರ್ತವ್ಯದ ಅವಧಿಯಲ್ಲಿ ಮೃತಪಟ್ಟಲ್ಲಿ ಮಾತ್ರ ಪರಿಗಣಿಸಬೇಕೆ ಅಥವಾ ಕರ್ತವ್ಯದ ಅವಧಿಯಲ್ಲಿ ಇಲ್ಲದ್ದಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ಮೃತಪಟ್ಟಲ್ಲಿಯು ಸಹ ಅನುಕಂಪದ ನೇಮಕ ಮಾಡಲು ಅವಕಾಶ ನೀಡಲು ಪರಿಗಣಿಸುವ ವಿಷಯದ ಕುರಿತು ಮಾನ್ಯ ಇಂಧನ ಸಚಿವರ ಗಮನ ಸೆಳೆದಿರುವ ಬಗ್ಗೆ.

* * * * *

**ಉತ್ತರ**:-

ಕವಿಪ್ರನಿನಿ ಆದೇಶ ಸಂಖ್ಯೆ ಕವಿಪ್ರನಿನಿ/ಬಿ5ಸಿ/721/2011-12, ಬೆಂಗಳೂರು, ದಿನಾಂಕ 19.05.2025ರ ಪ್ರಕಾರ ನೇರ ನೇಮಕಾತಿಯಡಿಯಲ್ಲಿ ಹುದ್ದೆಗಳ ಅಲಭ್ಯತೆಯಿಂದ ಅನುಕಂಪದ ಆಧಾರದ ನೇಮಕಾತಿ ನೀಡಲು ಸಹಾಯಕ ಮತ್ತು ಕಿರಿಯ ಇಂಜಿನಿಯರ್(ವಿ) ಹುದ್ದೆಗಳ ಬಾಕಿ ಇರುವ ಪ್ರಸ್ತಾವನೆಗಳಿಗೆ ಒಂದು ಬಾರಿಗೆ ಮಾತ್ರ ಅನ್ವಯಿಸುವಂತೆ ಪದೋನ್ನತಿ ಕೋಟಾದ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಅನುಮೋದನೆ ನೀಡಿರುವುದರಿಂದ, ಮೆಸ್ಕಾಂನಲ್ಲಿ ಬಾಕಿ ಇದ್ದ, ಸೆಪ್ಟಂಬರ್ 2023 ರಿಂದ ಅಕ್ಟೋಬರ್ 2024 ರವರೆಗೆ ಕಂಪೆನಿ ವ್ಯಾಪ್ತಿಯಲ್ಲಿ ಮೃತಪಟ್ಟ ನೌಕರರ 8 ಜನ ಅವಲಂಬಿತರಿಗೆ ಜುಲೈ 2025 ರಲ್ಲಿ ಈಗಾಗಲೇ ಆದೇಶ ನೀಡಿ ನೇಮಕಾತಿ ಮಾಡಲಾಗಿರುತ್ತದೆ.

ಕಾರ್ಕಳ ವಿಭಾಗಕ್ಕೆ ಸಂಬಂಧಿಸಿದಂತೆ ಸಾಣೂರು ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ, ಶ್ರೀ ಶಿವಕುಮಾರ್ ಎಸ್, ಕಿರಿಯ ಪವರ್‌ಮ್ಯಾನ್(ತರಬೇತಿ) ಇವರು ದಿನಾಂಕ 11.07.2022 ರಂದು ಕಿರಿಯ ಪವರ್‌ಮ್ಯಾನ್ ಹುದ್ದೆಗೆ (ತರಬೇತಿ) ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ತರಬೇತಿ ಅವಧಿಯಲ್ಲಿರುತ್ತಾರೆ. ಸದರಿ ತರಬೇತಿ ಅವಧಿಯು 03 ವರ್ಷದ ಅವಧಿಯಾಗಿರುತ್ತದೆ.

ಶ್ರೀ ಶಿವಕುಮಾರ್ ಎಸ್, ಕಿರಿಯ ಪವರ್‌ಮ್ಯಾನ್ ಇವರು ತೀರ್ಥಹಳ್ಳಿಯಲ್ಲಿ ದಿನಾಂಕ:21.04.2023ರಂದು ಸಂಜೆ 6.30 ಗಂಟೆಗೆ, ಕೇಂದ್ರ ಸ್ಥಾನ ಬಿಟ್ಟು ಹೊರಗೆ ಕರ್ತವ್ಯ ನಿರತವಲ್ಲದ ಅವಧಿಯಲ್ಲಿ ಬೈಕ್ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ.

ಕವಿಪ್ರನಿನಿ ಅಧಿಸೂಚನೆ ಕ್ರಮಾಂಕ KPTCL/B5/721/2011-12 ದಿನಾಂಕ: 08.09.2017ರ ಪ್ರಕಾರ ತರಬೇತಿ ಅವಧಿಯಲ್ಲಿರುವ Junior Station Attendant / Junior Lineman ಕರ್ತವ್ಯದ ವೇಳೆಯಲ್ಲಿ ಮೃತ ಪಟ್ಟರೆ, ಮಾತ್ರ ಅವರ ಅವಲಂಬಿತರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲು ಅವಕಾಶವಿದ್ದು, ಅದರ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ.

> Eligible dependents of Junior Station Attendant / Junior Lineman who were initially appointed on a consolidated remuneration from the Year -2015 onwards and who die while on duty during their period of training.

ಈ ಹಿನ್ನಲೆಯಲ್ಲಿ ಮೇಲಿನ ಅಧಿಸೂಚನೆಯಂತೆ ಸದರಿ ನೌಕರನು ತರಬೇತಿ ಅವಧಿಯಲ್ಲಿದ್ದ ಕಿರಿಯ ಪವರಮ್ಯಾನ್ ಆಗಿದ್ದು, ಕೇಂದ್ರ ಸ್ಥಾನವನ್ನು ಬಿಟ್ಟು ಹೊರಗೆ ಹಾಗೂ ಕರ್ತವ್ಯದ ಅವಧಿಯ ನಂತರ ಅಪಘಾತ ಸಂಭವಿಸಿ ಮೃತಪಟ್ಟಿರುವುದರಿಂದ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲು ನಿಗಮದ ನಿಯಮಗಳಡಿಯಲ್ಲಿ ಅವಕಾಶವಿರುವುದಿಲ್ಲ.

ಸಂಖ್ಯೆ: ಎನರ್ಜಿ 210 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು